ಪ್ರ. ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

ಸಿ.ಸಿ. ನಂ.**836/2023.**

ದಿನಾಂಕಃ**26-12-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಡಿ ಎನ್ ಮಂಜುನಾಥ ಸ್ವಾಮಿ | ಚಾಸಾ-11<br>ಪ್ರಾಸಾ5 |
| ತಂದೆಯ ಹೆಸರು | ನಾಗಭೂಷಣಾಚಾರ್ | |
| ವಯಸ್ಸು | 41 ವರ್ಷ | |
| ಉದ್ಯೋಗ | ಹೆಚ್ ಸಿ ಕಡೂರು ಪೊ.ಠಾಣೆ | |
| ವಾಸ | ಮತ್ತಿಘಟ್ಟ ಗ್ರಾಮ ಕಡೂರು | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ಆಕ್ಟೋಬರ್ 2022 ರಿಂದ ಕಡೂರು ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 14.10.2022 ರಂದು ನಾನು ಪೊಲೀಸ್ ಠಾಣಾ ಪ್ರಭಾರದಲ್ಲಿ ಇದ್ದಾಗ ಸಂಜೆ 6 ಗಂಟೆಗೆ ಚಾಸಾ 1 ರವರು ಹಾಜರುಪಡಿಸಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊ.ಸಂ.218/2022 ರಂತೆ ಪ್ರಕರಣದ ದಾಖಲಿಸಿರುತ್ತೇನೆ ಹಾಗೂ ಪ್ರ.ವ.ವರದಿಯನ್ನು ಮೇಲಾಧಿಕಾರಿಯವರಿಗೆ ಮತ್ತು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ದೂರನ್ನು ಮತ್ತು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದೂರಿನಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು ಹಾಗೂ ಸದರಿ ಪ್ರ.ವ.ವರದಿಯನ್ನು ನಿಪಿ 14 ಎಂದು ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

ದಿಃ15.10.2022 ರಂದು ಕೃತ್ಯ ಸ್ಥಳಕ್ಕೆ ಹೋಗಿ, ಚಾಸಾ 1 ರವರು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ಚಾಸಾ 5, 6 ರವರಿಗೆ ನೋಟೀಸು ನೀಡಿ ಪಂಚರಾಗಿ ಸಹಕರಿಸಲು ಕೋರಿ ಅವರು ಒಪ್ಪಿದ ನಂತರ ಸದರಿಯವರ ಸಮಕ್ಷಮ ಬೆಳಗ್ಗೆ 11.30 ರಿಂದ 12.30 ರ ವರೆಗೂ ಮಹಜರ್ ಜರುಗಿಸಿ ನಕಾಶೆ ತಯಾರು ಮಾಡಿ ಪೋಟೋ ತೆಗೆದಿರುತ್ತೇನೆ. ಸಾಕ್ಷಿಯು ಈಗಾಗಲೇ ಗುರುತಿಸಲಾಗಿರುವ ನಿಪಿ 2 ನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 3, 4 ಪೋಟೋ ನೋಡಿ ಗುರುತಿಸಿದರು.

ನಂತರ, ಚಾಸಾ 1, 5, 6 ರವರೊಂದಿಗೆ ಠಾಣೆಗೆ ಬಂದು, ಠಾಣಾ ಆವರಣದಲ್ಲಿ ಇದ್ದ ಅಪಘಾತಕ್ಕೆ ಸಂಬಂಧಪಟ್ಟ ಕೆಎ 57 ಎಫ್ 2775 ರ ಬಸ್ಸು, ಕೆಎ 18 ಇಡಿ 8316 ರ ಬೈಕ್ ಅನ್ನು ಮಹಜರ್ ಮೂಲಕ ಮಧ್ಯಾಹ್ನ 3.30 ರಿಂದ 4 ಗಂಟೆಯ ತನಕ ವಶಪಡಿಸಿಕೊಂಡಿರುತ್ತೇನೆ. ನಂತರ 2 ವಾಹನಗಳನ್ನು ಠಾಣಾ ಸ್ವತ್ತು ಪಟ್ಟಿಯಲ್ಲಿ ನಮೂದು ಮಾಡಿ ಸ್ವತ್ತು ಪಟ್ಟಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿಯು ಈಗಾಗಲೇ ಗುರುತಿಸಿರುವ ನಿಪಿ 5 ರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 5 ಬಿ ಎಂದು ಗುರುತಿಸಲಾಯಿತು.

ನಂತರ, ಸದರಿ ವಾಹನಗಳ ಐ ಎಂ ವಿ ತಪಾಸಣೆ ಮಾಡಿಸಿರುತ್ತೇನೆ. ನಂತರ ಕೆ ಎಸ್ ಆರ್ ಟಿ ಸಿ ಬಸ್ಸು ಬಿಡುಗಡೆ ಕಡೂರು ಡಿಪೋ ದವರಿಂದ ನೇಮಕಗೊಂಡಿದ್ದ ಚಾಸಾ 7 ರವರಿಗೆ ಕಲಂ 133 ಐ ಎಂ ವಿ ರಡಿ ನೋಟೀಸು ಜಾರಿ ಮಾಡಿ ಅದಕ್ಕೆ ಉತ್ತರ ಪಡೆದಿರುತ್ತೇನೆ. ನಂತರ, ಅಪಘಾತಕ್ಕೆ ಒಳಪಟ್ಟ ವಾಹನಗಳ ಐ ಎಂ ವಿ ವರದಿ ನೀಡುವಂತೆ ಚಾಸಾ 9 ರವರಿಗೆ ಕೋರಿರುತ್ತೇನೆ. ದಿಃ17.10.2022 ರಂದು ಆರೋಪಿಗೆ ಕಲಂ 41 ಎ ಸಿ ಆರ್ ಪಿ ಸಿ ನೋಟೀಸು ಜಾರಿ ಮಾಡಿರುತ್ತೇನೆ.

ನಂತರ, ಬಸ್ಸಿನ ಐ ಎಂ ವಿ ತಪಾಸಣೆಯಾದ ನಂತರ, ಚಾಸಾ 7 ರವರಿಂದ ಬಸ್ಸಿನ ದಾಖಲೆಗಳನ್ನು ಪರಿಶೀಲನೆ ಮಾಡಿ ಸ್ವೀಕರಿಸಿಕೊಂಡು ಕಡತಕ್ಕೆ ಲಗತ್ತಿಸಿಕೊಂಡು, ಚಾಸಾ 7 ರವರಿಂದ ನಷ್ಟ ಭರ್ತಿ ಮುಚ್ಚಳಿಕೆ ಪಡೆದು ಅವರ ವಶಕ್ಕೆ ಬಿಟ್ಟುಕೊಟ್ಟಿರುತ್ತೇನೆ. ದಿಃ14.12.2022 ರಂದು ಬೈಕಿನ ಆರ್ ಸಿ ಮಾಲೀಕರಾದ ಚಾಸಾ 8 ರವರಿಗೆ ಕಲಂ 133 ಐ ಎಂ ವಿ ರಡಿ ನೋಟೀಸು ಜಾರಿ ಮಾಡಿ ಅದಕ್ಕೆ ಉತ್ತರ ಪಡೆದಿರುತ್ತೇನೆ. ನಂತರ, ಬೈಕಿನ ಐ ಎಂ ವಿ ತಪಾಸಣೆಯಾದ ನಂತರ, ಚಾಸಾ 8 ರವರಿಂದ ಬೈಕಿನ ದಾಖಲೆಗಳನ್ನು ಪರಿಶೀಲನೆ ಮಾಡಿ ಸ್ವೀಕರಿಸಿಕೊಂಡು ಕಡತಕ್ಕೆ ಲಗತ್ತಿಸಿಕೊಂಡು, ಚಾಸಾ 8 ರವರಿಂದ ನಷ್ಟ ಭರ್ತಿ ಮುಚ್ಚಳಿಕೆ ಪಡೆದು ಅವರ ವಶಕ್ಕೆ ಬಿಟ್ಟುಕೊಟ್ಟಿರುತ್ತೇನೆ.

ನಂತರ, ಗಾಯಾಳುವಾದ ಚಾಸಾ 2 ರವರು ಮಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಡಿಸ್ಚಾರ್ಜ್ ಸಮ್ಮರಿಯ ನಕಲು ಪ್ರ 2 ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿರುತ್ತೇನೆ. ನಂತರ, ಚಾಸಾ 2 ರವರ ಗಾಯಾದ ಪ್ರಮಾಣ ಪತ್ರವನ್ನು ಚಾಸಾ 10 ರವರಿಂದ ಪಡೆದುಕೊಂಡಿರುತ್ತೇನೆ.

ದಿಃ20.12.2022 ರಂದು ಚಾಸಾ 2, 3, 4 ರವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ .

ದಿಃ21.12.2022 ರಂದು ಎರಡೂ ವಾಹನಗಳ ಐ ಎಂ ವಿ ವರದಿಯನ್ನು ಚಾಸಾ 9 ರವರಿಂದ ಪಡೆದಿರುತ್ತೇನೆ.

ನಂತರ ಪ್ರಕರಣದ ತನಿಖೆ ಮುಕ್ತಾಯಗೊಂಡಿದ್ದರಿಂದ ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಯು ಚಾಸಾ 7 ರವರಿಗೆ ನೀಡಿದ ಕಲಂ 133 ರಡಿಯ ನೋಟೀಸು ಮತ್ತು ಅದಕ್ಕೆ ಪಡೆದ ಉತ್ತ ರವನ್ನು ನೋಡಿ ಗುರುತಿಸಿದ್ದು, ನೋಟೀಸ್ ಅನ್ನು ನಿಪಿ 15, ಉತ್ತರವನ್ನು ನಿಪಿ 16 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 15ಎ ಮತ್ತು 16ಎ ಎಂದು ಗುರುತಿಸಲಾಯಿತು.

ಸಾಕ್ಷಿಯು ಚಾಸಾ 7 ರವರಿಗೆ ಡಿಪೋದವರು ನೇಮಿಸಿದ ಬಗ್ಗೆ ಅಥರೈಸೆಷನ್ ಲೆಟರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 17 ಎಂದು ಸಾಕ್ಷಿಯ ಸಹಿಯನ್ನು 17 ಎ ಎಂದು ಗುರುತಿಸಲಾಯಿತು.

ಆರೋಪಿ ಆ ದಿನ ಕರ್ತವ್ಯದಲ್ಲಿ ಇದ್ದ ಬಗ್ಗೆ ಆತನ ಕರ್ತವ್ಯ ದೃಢೀಕರಣ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ 18 ಎಂದು ಸಾಕ್ಷಿಯ ಸಹಿಯನ್ನು 18ಎ ಎಂದು ಗುರುತಿಸಲಾಯಿತು.

ಚಾಸಾ 7 ರವರಿಂದ ಪಡೆದ ನಷ್ಟಭರ್ತಿ ಮುಚ್ಚಳಿಕೆ ನೋಡಿ ಗುರುತಿಸಿದ್ದು ಅದನ್ನು ನಿಪಿ 19 ಎಂದು ಸಾಕ್ಷಿಯ ಸಹಿಯನ್ನು 19 ಎ ಎಂದು ಗುರುತಿಸಲಾಯಿತು.

ಸಾಕ್ಷಿಯು ಚಾಸಾ 8 ರವರಿಗೆ ನೀಡಿದ ಕಲಂ 133 ರಡಿಯ ನೋಟೀಸು ಮತ್ತು ಅದಕ್ಕೆ ಪಡೆದ ಉತ್ತರವನ್ನು ನೋಡಿ ಗುರುತಿಸಿದ್ದು, ನೋಟೀಸ್ ಅನ್ನು ನಿಪಿ 20, ಉತ್ತರವನ್ನು ನಿಪಿ 21 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 20ಎ ಮತ್ತು 21ಎ ಎಂದು ಗುರುತಿಸಲಾಯಿತು. ಚಾಸಾ 8ರವರಿಂದ ಪಡೆದ ನಷ್ಟಭರ್ತಿ ಮುಚ್ಚಳಿಕೆ ನೋಡಿ ಗುರುತಿಸಿದ್ದು ಅದನ್ನು ನಿಪಿ 22 ಎಂದು ಸಾಕ್ಷಿಯ ಸಹಿಯನ್ನು 22ಎ ಎಂದು ಗುರುತಿಸಲಾಯಿತು.

ಚಾಸಾ 9 ರವರಿಂದ ಪಡೆದ ಐ ಎಂ ವಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 23 ಎಂದು ಸಾಕ್ಷಿಯ ಸಹಿಯನ್ನು 23ಎ ಎಂದು ಗುರುತಿಸಲಾಯಿತು. ಚಾಸಾ 10

ರವರಿಂದ ಪಡೆದ ಚಾಸಾ 2 ರವರ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 24 ಎಂದು ಸಾಕ್ಷಿಯ ಸಹಿಯನ್ನು 24 ಎ ಎಂದು ಗುರುತಿಸಲಾಯಿತು.

ಚಾಸಾ 5, 6 ರವರಿಗೆ ನೀಡಿದ ನೋಟೀಸ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 25 ಎಂದು ಸಾಕ್ಷಿಯ ಸಹಿಯನ್ನು 25 ಎ ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿದರು.

ಪಾಟೀಸವಾಲುಃ ಆರೋಪಿ ಪರ ಶ್ರೀ. ಸಿ ವಿ ಎಸ್ ವಕೀಲರಿಂದ

ದೂರಿನಲ್ಲಿ ಅಪಘಾತವನ್ನು ಪ್ರತ್ಯಕ್ಷವಾಗಿ ಇಂತಹ ವ್ಯಕ್ತಿಗಳು ನೋಡಿರುತ್ತಾರೆ ಎಂದು ನಮೂದು ಇದೆಯೇ ಎಂದರೆ ಸಾಕ್ಷಿಯು ಚಾಸಾ 1 ರವರು ಹಿಂಬದಿಯಿಂದ ಹೋಗುತ್ತಿರುವಾಗ ನಾನು ನೋಡಿರುತ್ತೇನ ಎಂದೇ ದೂರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ 1 ರವರು ವಾಹನದ ಹಿಂಬದಿಯಲ್ಲಿ ಹೋಗುತ್ತಿರಲಿಲ್ಲ ಆ ಸಮಯದಲ್ಲಿ ಅವರು ಅವರ ಊರಿನಲ್ಲಿ ಇದ್ದರು ಎಂದರೆ ಸರಿಯಲ್ಲ.

ಸ್ಥಳ ಮಹಜರ್ ಮಾಡಿದಾಗ ಸ್ಥಳದಲ್ಲಿ ಅಪಘಾತದ ಕುರುಹುಗಳು ಕಂಡುಬಂದಿರುವುದಿಲ್ಲ. ಅಮಾನತ್ತು ಮಹಜರ್ ಅನ್ನು ದಿಃ15.10.2022 ರಂದು ಮಧ್ಯಾಹ್ನ 3.30 ರಿಂದ 4 ಗಂಟೆಯಲ್ಲಿ ಮಾಡಿರುತ್ತೇನೆ. ನಿಪಿ 23 ರ 4 ನೇ ಕಾಲಂ ನಲ್ಲಿ ಮಧ್ಯಾಹ್ನ 3 ಗಂಟೆಗೆ ಐ ಎಂ ವಿ ತಪಾಸಣೆ ನಡೆಸಿರುತ್ತೇನೆ ಎಂದು ವರದಿ ನೀಡಿದ್ದಾರೆ ಎಂದರೆ ಸರಿ. ನಾನು ನಿಪಿ5 ರ ಪ್ರಕಾರ 3 ಗಂಟೆಗೆ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರಲಿಲ್ಲ ಎಂದರೆ ಸರಿ. ನಾನು ಪಂಚರಿಗೆ ನೀಡಿದ ನೋಟೀಸ್ ಅನ್ನು ಕಡತಕ್ಕೆ ಲಗತ್ತಿಸಿದ್ದೆ. ನಾನು ಕೆ ಎಸ್ ಆರ್ ಟಿ ಸಿ ಸಂಸ್ಥೆಗೆ ದಿಃ15.10.2022 ರಂದು ಚಾಸಾ 7 ರವರಿಗೆ ನೋಟೀಸು ಜಾರಿ ಮಾಡಿರುತ್ತೇನೆ. ನೋಟೀಸ್ ಅನ್ನು ವಾಹನ ಅಮಾನತ್ತು ಪಡಿಸಿಕೊಂಡ ನಂತರ ನೀಡಿರುತ್ತೇನೆ. ಚಾಸಾ 7 ರವರು ಅದೇ ದಿನ ಉತ್ತರ ನೀಡಿರುತ್ತಾರೆ. ಚಾಸಾ 7 ರವರು ವಾಹನ ಬಿಡುಗಡೆಗೆಂದು ಬಂದಿದ್ದರು, ಆಗ ನೋಟೀಸು ನೀಡಿ ಉತ್ತರ ಪಡೆದಿದ್ದೇನೆ.

ನಾನು ಸ್ಥಳ ಮಹಜರ್ ಮಾಡಲು ಇದೇ ಜಾಗದಲ್ಲಿ ಅಪಘಾತವಾಗಿದೆ ಎಂದು ಹೇಳಲು ಕುರುಹುಗಳು ಇರಲಿಲ್ಲ ಎಂದರೆ ಚಾಸಾ 1 ರವರು ತೋರಿಸಿದ ಅಪಘಾತ ಸ್ಥಳದಲ್ಲಿ ನಾನು ಮಹಜರ್ ಮಾಡಿರುತ್ತೇನೆ. ದೂರಿನಲ್ಲಿ ವೇದಾ ಪಾರ್ಕ್ ಮುಂಭಾಗ ಅಪಘಾತವಾಗಿದೆ ಎಂದು ದೂರು ನೀಡಿದ್ದು, ನಾನು ಸರ್ಕಾರಿ ಉಪಕರಣ ಮತ್ತು ತರಬೇತಿ

ಕೇಂದ್ರ ಡಿಪ್ಲೋಮೊ ಕಾಲೇಜ್ ಇದುರು ಮಹಜರ್ ಮಾಡಿದ್ದೇನೆ ಎಂದರೆ ಸಾಕ್ಷಿಯು ಅದು ಸಹಃ ವೇದಾ ಪಾರ್ಕ್ ಮುಂದೆಯೇ ಇರುತ್ತದೆ. ಅಪಘಾತ ಸ್ಥಳದಲ್ಲಿ ವೇದಾ ಪಾರ್ಕ್ ಎಷ್ಟು ದೂರ ಇದೆ ಎಂದು ಅಳತೆ ನೋಡಿರುವುದಿಲ್ಲ, ಕಣ್ಣಿನಿಂದ ಕಾಣುತ್ತದೆ. ಡಿಪ್ಲೋಮೊ ಕಾಲೇಜ್ ನಿಂದ ವೇದಾ ಪಾರ್ಕ್ ಹಿಂಬದಿಯಲ್ಲಿ ಇದೆ. ಅಪಘಾತ ಸ್ಥಳದಿಂದ ಡಿಪ್ಲೋಮೊ ಕಾಲೇಜ್ 100 ಅಡಿ ದೂರದಲ್ಲಿ ಇದೆ ಎಂದು ನಮೂದು ಮಾಡಿದ್ದು ಅದರ ಹಿಂಬದಿ ಅಂದರೆ ವೇದಾ ಪಾರ್ಕ್ ಇನ್ನು ದೂರದಲ್ಲಿ ಇದೆ ಎಂದರೆ ಸರಿ. ಚಾಸಾ 2 ರವರು ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿರುತ್ತಾರೆ. ಆರೋಪಿ ತಪ್ಪಿನಿಂದ ಅಪಘಾತವಾಗದೇ ಇದ್ದರು ಸಹಃ ನಾನೇ ಚಾಸಾ 1 ರವರಿಂದ ಸುಳ್ಳು ದೂರು ಪಡೆದುಕೊಂಡು ಅವರಿಗೆ ಸಹಾಯ ಮಾಡಲು ಸುಳ್ಳು ದೂರು ದಾಖಲು ಮಾಡಿ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿಲ್ಲ ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಆರೋಪಿ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.